ಇಂಥ ಸ್ವಾಮಿ ವಿವೇಕಾನಂದರು ಭಾರತದ ಪುರೋಭಿವೃದ್ಧಿಗಾಗಿಯೂ, ಸರ್ವತೋಮುಖ ಬೆಳವಣಿಗೆಗಾಗಿಯೂ, ನೀಡಿದ ಪರಿಣಾಮಕಾರಿ ಹಾಗೂ ಕ್ರಾಂತಿಕಾರಿ ಸಲಹೆ ಸೂಚನೆಗಳು ಅಪಾರ. ಅವರ ಪತ್ರಗಳಲ್ಲೂ, ಭಾಷಣಗಳಲ್ಲೂ ಆ ನುಡಿಮುತ್ತುಗಳ ರಾಶಿಯನ್ನೇ ಕಾಣಬಹುದು. ನಾವು ನಮ್ಮ ಇತರ ಅನುಪಯುಕ್ತ ಕಾರ್ಯಗಳನ್ನು ಬದಿಗಿಟ್ಟು, ಅವರ ಜ್ವಲಂತ ಜೀವನ ಸಂದೇಶಗಳನ್ನು ಅಧ್ಯಯನ ಮಾಡುವ ಶ್ರಮ ತೆಗೆದುಕೊಳ್ಳಬೇಕು.

ಆದರೆ ಒಂದು ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಯುವಕರು ವಿವೇಕಾನಂದರ ಸಾಹಿತ್ಯವನ್ನು ಓದುವಂತೆ ಮಾಡುವುದು ಹೇಗೆ? ನಿಜ, ಇದು ಸುಲಭದ ಕೆಲಸವೇನಲ್ಲ. ಆದರೆ, ಸಮಾಜದ ಹಿತವನ್ನು, ಅದರಲ್ಲೂ ಯುವಜನತೆಯ ಏಳ್ಗೆಯನ್ನು ಬಯಸುವ ಗಣ್ಯರೂ, ಶಿಕ್ಷಣತಜ್ಞರೂ ಮನಸ್ಸು ಮಾಡಿದರೆ ಇದು ಅಸಾಧ್ಯವೇನಲ್ಲ. ಎಳವೆಯಿಂದಲೂ ಇಂಥ ಶಕ್ತಿಪೂರ್ಣ ಚಿಂತನೆಗಳನ್ನು ಎಳೆಯರ ಮಿದುಳಿನಲ್ಲಿ ತುಂಬುತ್ತ ಬರುವುದೇ ಸೂಕ್ತ, ಸಮರ್ಥ ಉಪಾಯ. ಶಾಲಾ ಪಠ್ಯಪುಸ್ತಕಗಳಲ್ಲಿ ಸ್ವಾಮಿ ವಿವೇಕಾನಂದರ ವಿದ್ಯಾರ್ಥಿಜೀವನದ ವಿವಿಧ ಹೊಳಹುಗಳನ್ನು ಅಳವಡಿಸಬೇಕು. ಕಾಲೇಜುಗಳಲ್ಲಿ, ಸ್ನಾತಕೋತ್ತರ ಹಂತಗಳಲ್ಲಿ, ಪಿ ಎಚ್.ಡಿ. ಹಂತದಲ್ಲೂ ಕೂಡ ಅವರ ಜೀವನ ಸಂದೇಶಗಳು ವಿದ್ಯಾರ್ಥಿಗಳ ಮನಮುಟ್ಟುವಂತೆ ಮಾಡಬೇಕು. ಅದರಲ್ಲೂ ಮುಖ್ಯವಾಗಿ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸ್ವಾಮೀಜಿಯವರ ಚೈತನ್ಯದಾಯಕ, ಶೀಲವರ್ಧಕ ವಿಚಾರಗಳನ್ನು ಬಿತ್ತಲು ಸಾಧ್ಯವಾದರಂತೂ ಶೀಘ್ರದಲ್ಲೇ ನಾಡಿನಲ್ಲೊಂದು ಉತ್ಕ್ರಾಂತಿಯನ್ನೇ ನಿರೀಕ್ಷಿಸಬಹುದು. ಈ ವಿಷಯದಲ್ಲಿ ಪ್ರಾಜ್ಞರು, ವಿವೇಕಿಗಳು, ವಿಚಾರವಂತರು ಎಷ್ಟು ಬೇಗ ಪ್ರವೃತ್ತರಾದರೆ ಅಷ್ಟು ಲಾಭ.

**ಈ ದಿಸೆಯಲ್ಲಿ ಬೇಗನೆ ಎಚ್ಚೆತ್ತುಕೊಳ್ಳೋಣ, ಕಾರ್ಯಶೀಲರಾಗೋಣ, ಗುರಿಮುಟ್ಟುವವರೆಗೂ ನಿಲ್ಲದೆ ಮುನ್ನುಗ್ಗೋಣ!**

★

## ವಾರ್ತಾ ವಿಶ್ಲೇಷಣೆ

# ಅಮೆರಿಕದಲ್ಲಿ ಹಿಂದೂ ಅಲೆ

**ಮೇ**ಲಿನದು ನಾವು ಕೊಟ್ಟ ತಲೆಬರಹವಲ್ಲ. **'ವಿಜಯ ಕರ್ನಾಟಕ'** ಪತ್ರಿಕೆಯಲ್ಲಿ ೨೦೦೯, ಸೆಪ್ಟೆಂಬರ್ ೧೬ ರಂದು ಪ್ರಕಟವಾದ ಎಂ.ಎಸ್.ರಾವ್ ಅವರ ಅಂಕಣ ಬರಹದ ಶೀರ್ಷಿಕೆ.

ಅಮೆರಿಕದ ಪ್ರಸಿದ್ಧ ಯೋಗಶಾಸ್ತ್ರ ಕೋವಿದೆ ಲಿಂಡಾ ಗುಡ್‌ಮ್ಯಾನ್ ತನಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆ ಎಂದು ಹೇಳಿಕೊಳ್ಳುತ್ತಾಳೆ. ಪ್ರಸಿದ್ಧ ನಿಯತಕಾಲಿಕವೊಂದರ ಸಂಪಾದಕ ಲಿಸಾ ಮಿಲ್ಲರ್, ಅಮೆರಿಕನ್ನರು ನಿಧಾನವಾಗಿ ಹಿಂದೂ ಸಿದ್ಧಾಂತದತ್ತ ಆಕರ್ಷಿತರಾಗಿ, ಸಾಂಪ್ರದಾಯಿಕ ಕ್ರೈಸ್ತ ನಂಬಿಕೆಗಳಿಂದ ದೂರವಾಗುತ್ತಿದ್ದಾರೆ ಎಂದು ಬರೆದಿದ್ದಾರೆ. ಅದಲ್ಲದೆ ಶೇಕಡ ೩೦ ರಷ್ಟು ಅಮೆರಿಕನ್ನರು ಹಿಂದೂ ಪದ್ಧತಿಯಾದ ಶವದಹನವನ್ನು ಅನುಸರಿಸುತ್ತಿದ್ದಾರಂತೆ. ಇನ್ನೊಂದು ಅಚ್ಚರಿ ಹುಟ್ಟಿಸುವ ಸಂಗತಿಯೆಂದರೆ, ಅಮೆರಿಕದ ಪ್ರಸಿದ್ಧ ಪತ್ರಿಕೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ, ಶೇಕಡ ೨೪ ರಷ್ಟು ಜನ ತಾವು ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿದ್ದೇವೆ ಎಂದು ಹೇಳಿಕೊಂಡಿದ್ದಾರೆ.

ಅಮೆರಿಕ ದೇಶದಲ್ಲಿ ಭೌತಿಕ ಸಂಪತ್ತು ಸಮೃದ್ಧವಾಗಿದೆ. ಆದರೂ, ಅಮೆರಿಕದಲ್ಲಿ ಇರುವಷ್ಟು ಆತ್ಮಹತ್ಯೆ, ದಾಂಪತ್ಯ ವಿಚ್ಛೇದನ, ಮಾನಸಿಕ ರೋಗಗಳು ಬೇರೆಲ್ಲಿಯೂ ಕಂಡುಬರುವುದಿಲ್ಲ. ಸ್ವಚ್ಛಂದ ಪ್ರವೃತ್ತಿ ತನ್ನ ಮಿತಿಯನ್ನು ಮೀರಿಹೋಗಿ, ಅಲ್ಲಿನ ಯುವಶಕ್ತಿ ಮಾನಸಿಕ ಸ್ತಿಮಿತವನ್ನು ಕಳೆದುಕೊಂಡಿದೆ. ಈ ಪರಿಸ್ಥಿತಿಯಲ್ಲಿ ಹಿಂದೂಧರ್ಮದ ಓಜಸ್ಸು, ವಿಚಾರಸರಣಿ, ಪ್ರಜ್ಞಾಚೇತನವನ್ನು ಮುಟ್ಟುವ ದಿವ್ಯವಾಣಿಗಳು, ದೇವರು ಮತ್ತು ಬದುಕನ್ನು ಕುರಿತಂತೆ ಅಮೆರಿಕದ ಜನತೆಯ ಅಭಿಪ್ರಾಯಗಳನ್ನು ಬದಲು ಮಾಡಿವೆ; ಅವರ ಸಹಜ ಪ್ರವತ್ತಿ ಹಿಂದೂಧರ್ಮದತ್ತ ವಾಲುತ್ತಿದೆ – ಇದು ಶ್ರೀ ಎಂ. ಎಸ್. ರಾವ್ ಅವರ ಲೇಖನದ ತಿರುಳು.

ಪಾಶ್ಚಾತ್ಯ ನಾಗರಿಕತೆಯಲ್ಲಿ ಧರ್ಮದ ಪರಿಕಲ್ಪನೆಯು ವಿಫಲವಾಗಿರುವುದನ್ನು ಇದು ಸಂಕೇತಿಸುತ್ತದೆ. ಧರ್ಮವು ಅಧಿಕಾರಿಶಾಹಿ, ಅವೈಜ್ಞಾನಿಕ, ಅಧ್ಯಾತ್ಮವಿಹೀನ ಮತ್ತು ಅನೈತಿಕವಾದಾಗ ಸಹಜವಾಗಿ ಅದು ಸಮಾಜದ ತಿರಸ್ಕಾರಕ್ಕೆ ಒಳಗಾಗುತ್ತದೆ. ಇದನ್ನೇ ನಾವು ಪಾಶ್ಚಾತ್ಯ ಜಗತ್ತಿನಲ್ಲಿ ಇಂದು ಕಾಣುತ್ತಿರುವುದು. ಹಾಗೆಂದು ಹಿಂದೂಧರ್ಮವು ಈ ಕಳಂಕಗಳಿಂದ ಮುಕ್ತ ಎಂದು ಇದರ ಅರ್ಥವಲ್ಲ. ಹಾಗಿದ್ದರೆ, ಅಂಥ ಒಂದು ಧರ್ಮವನ್ನು ಬಹುತೇಕ ಒಪ್ಪಿಕೊಂಡ, ನಮ್ಮ ಈ ಸಮಾಜ ಇಷ್ಟು ನಿರ್ಜೀವವಾಗುತ್ತಿರಲಿಲ್ಲ. ಪಾಶ್ಚಾತ್ಯ ಜಗತ್ತಿನಲ್ಲಿ ಸಂಪ್ರದಾಯಬದ್ಧ ಕ್ರೈಸ್ತಧರ್ಮವು ಸ್ವಸ್ಥ ಸಮಾಜವನ್ನು ನಿರ್ಮಿಸಲು ಹೇಗೆ ವಿಫಲವಾಯಿತೋ, ಅದಕ್ಕಿಂತಲೂ ತೀವ್ರ ಪ್ರಮಾಣದಲ್ಲಿ ಹಿಂದೂಧರ್ಮವು ಭಾರತದಲ್ಲಿ ಆರೋಗ್ಯಕರ ಸಮಾಜವನ್ನು ಸೃಷ್ಟಿಸಲು ವಿಫಲವಾಗಿರುವುದೂ ಕಟುಸತ್ಯ. ಅದನ್ನು ಯಾರೂ ಅಲ್ಲಗಳೆಯಲಾರರು.

ಹೀಗಾಗಿ ಅಮೆರಿಕದಲ್ಲಿ ಹಿಂದೂ ಅಲೆ ಎದ್ದಿದೆಯೆಂದು ಸಂತೋಷಪಡುವುದಕ್ಕಿಂತ, ಅದೇ ಹಿಂದೂಧರ್ಮವು ನಮ್ಮನ್ನು ಭ್ರಷ್ಟಾಚಾರ, ಬಡತನ, ಶೋಷಣೆಗಳಿಂದ ಮುಕ್ತವಾದ ಜನಾಂಗವನ್ನಾಗಿ ರೂಪಿಸುವಲ್ಲಿ ಏಕೆ ಸೋತುಹೋಗಿದೆ ಎಂದು ಗಂಭೀರವಾಗಿ ಚಿಂತಿಸುವುದು ಒಳಿತು. ಧರ್ಮದ ಅಮುಖ್ಯ ಸಂಗತಿಗಳನ್ನು ತೆಗೆದುಹಾಕಿ ಅದರ ತಿರುಳಾದ ನೈತಿಕತೆ, ಮಾನವೀಯತೆ ಮತ್ತು ಆಧ್ಯಾತ್ಮಿಕತೆಗಳಿಗೆ ಒತ್ತುಕೊಡುವುದು ಲೇಸು. ಯಾವುದೇ ಆಚಾರ–ವಿಚಾರ ನಮ್ಮ ಬದುಕನ್ನು ಸಾರ್ಥಕವನ್ನಾಗಿ ಮಾಡದಿದ್ದರೆ, ಅದರಿಂದ ಏನು ತಾನೇ ಪ್ರಯೋಜನ?

★